ಉ) ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನಲ್ಲಿ ನಿರಂತರ ಜ್ಯೋತಿ ಯೋಜನೆಗಳನ್ನು ಮಾರ್ಚ 2016ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಪಶು ಚಿಕಿತ್ಸಾಲಯಗಳು

5388 (5453); ಶ್ರೀ ನಾಗರಾಜ್ ಬಿ. ಎಂ. (ಸಿರಗುಪ್ಪ)

ಅ) ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾಲಯಗಳು ಎಷ್ಟು; ಈ ಕ್ಷೇತ್ರದಲ್ಲಿರುವ ದನಗಳ, ಕುರಿಗಳು ಹಾಗೂ ಕೋಳಿ ಸಾಕಾಣಿಕೆ ಕೇಂದ್ರಗಳ ಸಂಖ್ಯೆ ಎಷ್ಟು; ಮಾಹಿತಿ ನೀಡುವುದು.

ಆ) ಈಗಿರುವ ರಾಸುಗಳ ಸಂಖ್ಯೆಗೆ ಅನುಗುಣವಾಗಿ ಚಿಕಿತ್ಸಾಲಯಗಳು ಇವೆಯೇ;

ಇ) ಹಾಗಿದ್ದಲ್ಲಿ, ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳ ಕೊರತೆ ಇದೆಯೇ; ಹಾಗಿದ್ದಲ್ಲಿ, ಸಿಬ್ಬಂದಿಗಳನ್ನು ನೇಮಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಈ) ಈ ಆಸ್ಪತ್ರೆಗಳಲ್ಲಿ ಪಶು ಚಿಕಿತ್ಸೆಗೆ ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಕೊರತೆ ಇರುವ ಔಷಧಿಗಳನ್ನು ಸರಬರಾಜು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎ. ಮಂಜು (ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು)

ಅ) ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಪಶು ಚಿಕಿತ್ಸಾಲಯಗಳ ಸಂಖ್ಯೆ 10 ಮತ್ತು ಪಶು ಆಸ್ಪತ್ರೆ 2. ಸಿರಗುಪ್ಪ ತಾಲ್ಲೂಕಿನಲ್ಲಿ ದನ, ಕುರಿ ಮತ್ತು ಕೋಳಿ ಸಾಕಾಣಿಕೆ ಕೇಂದ್ರಗಳು ಇರುವುದಿಲ್ಲ.

ಆ) ಇದೆ. 19ನೇ ಜಾನುವಾರು ಗಣತಿಯಂತೆ ಸಿರಗುಪ್ಪ ತಾಲ್ಲೂಕಿನಲ್ಲಿ ಒಟ್ಟು 60,714 ಜಾನುವಾರು ಘಟಕಗಳು ಇರುತ್ತವೆ. ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಪಶುವೈದ್ಯರನ್ನು ಹೊಂದಿರುವ ಒಂದು ಪಶುವೈದ್ಯ ಸಂಸ್ಥೆಯಂತೆ ಒಟ್ಟು 12 ಪಶುವೈದ್ಯ ಸಂಸ್ಥೆಗಳು ಅವಶ್ಯವಿರುತ್ತವೆ; ಹಾಲಿ 13 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಇ) ಇಲಾಖೆಯಲ್ಲಿ ಖಾಲಿಯಿರುವ ಪಶುವೈದ್ಯಾಧಿಕಾರಿಗಳ ಹುದ್ದೆ ಭರ್ತಿ ಮಾಡುವ ಸಂಬಂಧ ಒಟ್ಟು 305 ಹುದ್ದೆಗಳನ್ನು ತುಂಬಲು ಅರ್ಜಿ ಆಹ್ವಾನಿಸಿ, ದಿನಾಂಕ: 19.06.2015 ರಂದು ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಪ್ರಕರಣೆ ವಿರುದ್ಧ ಮಾನ್ಯ ಕರ್ನಾಟಕ ನ್ಯಾಯ ಮಂಡಳಿಯು ಕೆಲವು ಅಂಶಗಳಿಗೆ ತೀರ್ಪು ನೀಡಿದ್ದು ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಕೆಲವು ಮಾರ್ಪಾಡುಗಳ ಅವಶ್ಯಕತೆ ಇದ್ದು, ಅದರಂತೆ ಕ್ರಮವಹಿಸಲಾಗುತ್ತಿದೆ.

ಹೈದರಾಬಾದ್–ಕರ್ನಾಟಕ ಪ್ರದೇಶದ 6 ಜಿಲ್ಲೆಗಳಲ್ಲಿ ಖಾಲಿಯಿರುವ 110 ಪಶುವೈದ್ಯಾಧಿಕಾರಿಗಳನ್ನು ತುಂಬಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಸರ್ಕಾರದ ಮುಖಾಂತರ ಪ್ರಸ್ತಾವನೆ ಸಲ್ಲಿಸಲಾಗಿದೆ.

ಈ) ಸಿರಗುಪ್ಪ ತಾಲ್ಲೂಕಿನ ಪಶುವೈದ್ಯ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇರುವುದಿಲ್ಲ.

ಉ) ಜಿಲ್ಲಾ ವಲಯ ಯೋಜನಾ ಅನುದಾನದಲ್ಲಿ ಔಷಧಿಗಳ ಖರೀದಿಗಾಗಿ ರೂ. 50.00 ಲಕ್ಷ ನಿಗದಿಯಾಗಿರುತ್ತದೆ. ಸದರಿ ಅನುದಾನದಲ್ಲಿ ಔಷಧಿ ರಾಸಾಯನಿಕಗಳನ್ನು ಜಿಲ್ಲಾ ಉಪನಿರ್ದೇಶಕರು ಖರೀದಿಸಿ ವಿತರಿಸುತ್ತಿದ್ದಾರೆ. ಪ್ರಸ್ತುತ ಜಾನುವಾರು ಚಿಕಿತ್ಸೆಗೆ ತೊಂದರೆಯಾಗದಂತೆ ಲಭ್ಯವಿರುವ ಔಷಧಗಿಳ್ನನು ಬಳಸಿ ಜಾನುವಾರುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ರಾಜ್ಯ ವಲಯದಲ್ಲಿ ಔಷಧಿಗಳ ಖರೀದಿದಾಗಿ ಯೋಜನಾ ಅನುದಾನದಲ್ಲಿ ರೂ. 900 ಲಕ್ಷ ಮತ್ತು ಯೋಜನೇತರದಲ್ಲಿ ರೂ.

940 ಲಕ್ಷ ನಿಗದಿಯಾಗಿದ್ದು, ಜಿಲ್ಲಾವಾರು ಮರುಹಂಚಿಕೆ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಜಿಲ್ಲಗೆಗಳ ಪಶುವೈದ್ಯಕೀಯ ಸಂಸ್ಥೆಗಳಿಂದ ಬೇಡಿಕೆ ಪಡೆದು, ಅನುಮೋದಿತ ದರಗುತ್ತಿಗೆ ಸಂಸ್ಥೆಗಳ ಮೂಲಕ ಔಷಧಿ ಖರೀದಿಸಿ ಸರಬರಾಜು ಮಾಡಲು ಜಿಲ್ಲಾ ಉಪನಿರ್ದೇಶಕರು ಕ್ರಮವಹಿಸುತ್ತಿದ್ದಾರೆ.

ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳ ಕೊರತೆ

5396 (5965); ಶ್ರೀ ನಾರಾಯಣ ಗೌಡ, (ಕೆ. ಆರ್. ಪೇಟೆ)

ಅ) ಕೆ. ಆರ್. ಪೇಟೆ ತಾಲ್ಲೂಕಿನಲ್ಲಿ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕೊರತೆ ಇರುವ ವೈದ್ಯರು ಹಾಗೂ ಸಿಬ್ಬಂದಿಯನ್ನು ತುಂಬಲು ಕೈಗೊಂಡಿರುವ ಕ್ರಮಗಳೇನು;

ಶ್ರೀ ಎ. ಮಂಜು (ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು)

ಅ) ಹೌದು, ಬಂದಿರುತ್ತದೆ.

ಆ) ಕೆ. ಆರ್. ಪೇಟೆ ತಾಲ್ಲೂಕಿನಲ್ಲಿ ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿಗೆ ಮಂಜೂರು, ಭರ್ತಿ ಹಾಗೂ ಖಾಲಿ ಇರುವ ವೃಂದವಾರು ವಿವರ ಈ ಕೆಳಕಂಡಂತಿದೆ:

ಕ್ರ. ಸಂ.	ಪದನಾಮ	ಮಂಜೂರು	ಭರ್ತಿ	ಖಾಲಿ
1	ಸಹಾಯಕ ನಿರ್ದೇಶಕರು	01	01	00
2	ಪಶುವೈದ್ಯಾಧಿಕಾರಿ	15	05	10
3	ಜಾನುವಾರು ಅಭಿವೃದ್ಧಿ ಅಧಿಕಾರಿ	01	00	01